<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C No. 168/2013
CW-22 PW-14

ಹೆಸರು : ಚಂದ್ರಕಾಂತ್ ಪೂಜಾರಿ

ತಂದೆಯ ಹೆಸರು: ಸಿದ್ದರಾಯ

ವಯಸ್ಸು : 57 ವರ್ಷ

ಉದ್ಯೋಗ : ಹೆಚ್ಚುವರಿ ನಿರೀಕ್ಷಕರು ಬೀದರ್

ವಾಸ ಸ್ಥಳ : ಬೀದರ್

---

<u>ಪ್ರಮಾಣವಚನ ಭೋಧಿಸಲಾಯಿತು. ದಿಃ 15-12-2025</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

2011 ರಿಂದ 2013 ವರೆಗೆ ಚಿತ್ತಾಪುರ ವಲಯದ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿವರ್ಹಿಸಿದ್ದೇನೆ.

ದಿಃ 30.06.2011ರಂದು ಈ ಪ್ರಕರಣದ ಕಡತವನ್ನು ಶ್ರೀ ಎಸ್.ವೈ ಪಾಟೀಲ್ ಅವರಿಂದ ಪಡೆದು ತನಿಖೆ ಮಾಡಿರುತ್ತೇನೆ.

ದಿಃ 26.09.2012 ರಂದು ಆರೋಪಿತನ ವಿರುದ್ಧ ಅಭಿಯೋಜನೆ ನಡೆಸಲು ಸರಕಾರದಿಂದ ಆದೇಶ ಪಡೆದಿರುತ್ತೇನೆ.

ದಿಃ 21.12.2012ರಂದು ಆರೋಪಿತನ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ನಾನು ಸ್ವೀಕರಿಸಿದ ಸರಕಾರದ ಆದೇಶವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈಗ ಗುರುತಿಸಿದ ಸರಕಾರದ ಆದೇಶದ ಪ್ರತಿಯು ನಕಲು ಪ್ರತಿಯಾದ ಕಾರಣ ಸದರಿ ದಾಖಲೆಯನ್ನು ನಿಶಾನೆಗೊಳಿಸಲಾಗಲಿಲ್ಲ.

ಪಾಟೀ ಸವಾಲುಃ  ಆರೋಪಿ ಪರ ಶ್ರೀ.ಸಿ.ಬಿ.ಎ.ವಕೀಲರಿಂದ -

ನೀವು ಹೇಳಿದಂತೆ ಆರೋಪಿತನ ವಿರುದ್ಧ ಪ್ರಕರಣ ದಾಖಲಿಸಲು ಸರಕಾರದಿಂದ ಯಾವುದೇ ಆದೇಶ ಪಡೆದಿಲ್ಲ ಎಂದರೆ ಸರಿಯಲ್ಲ.  ಈ ಪ್ರಕರಣದಲ್ಲಿ ಮೊದಲಿನ ತನಿಖಾಧಿಕಾರಿ ಈ ಪ್ರಕರಣದಲ್ಲಿ ಬಿ ಅಂತಿಮ ವರದಿಯನ್ನು ಸಲ್ಲಿಸಿದ್ದರು ಎಂದರೆ ಸರಿ.  ಆರೋಪಿತ ಯಾವುದೇ ಗುನ್ಹೆ ಮಾಡಿಲ್ಲ ಎಂದು ಕಂಡು ಬಂದರೂ ಸಹ ನಿಮ್ಮ ಮೇಲಾಧಿಕಾರಿಗಳ ಮತ್ತು ರಾಜಕೀಯ ಒತ್ತಡದಲ್ಲಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.